**ಸಾಕ್ಷಿಗೆ ದಿನಾಂಕ:16-12-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ.SNM ವಕೀಲರಿಂದ ::**

ಇದೇ ನ್ಯಾಯಾಲಯದಲ್ಲಿ ಹಿಂದೆ OS 66/2009 ರಂತೆ ವಿಭಾಗ ಕೋರಿ ಒಂದು ದಾವೆ ಹೂಡಲಾಗಿ ಅದರಲ್ಲಿ ನಾನು ಸಹ ಪಕ್ಷಗಾರಳಾಗಿ ವಕೀಲರ ಮುಖಾಂತರ ಸದರಿ ದಾವೆಯನ್ನು ನೆಡೆಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗಳ ಹೆಸರು ಸುಜಾತಾ. ಕಾಟಿಗನೆರೆ ಸರ್ವೇ ನಂಬರ್.13 ರಲ್ಲಿ ನನ್ನ ಮಗಳ ಹೆಸರಿನಲ್ಲಿ 33 ಗುಂಟೆ ಜಾಗದ ಖಾತೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. OS 66/2009 ದಾವೆಯ ವಿಚಾರಗಳು ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಸಿದ್ರಾಮಪ್ಪ ಅವರು 1991 ರಲ್ಲಿ ಒಂದು ನೊಂದಾಯಿತ ಮರಣ ಶಾಸನ ಪತ್ರವನ್ನು ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಲ್ ನಲ್ಲಿ ಕುಟುಂಬದ ಆಸ್ತಿಗಳು ಆಗಲೇ ವಿಭಾಗ ಅಗಿದ್ದು ತನ್ನ ಹಿಸ್ಸೆಗೆ ಬಂದ ಜಮೀನನ್ನು ಅವರ ಮಕ್ಕಳಾದ 2 ಮತ್ತು 3 ನೇ ಪ್ರತಿವಾದಿಗಳು ಚೇತನ್ ಹಾಗೂ ನನ್ನ ಮಗಳು ಸುಜಾತಾರವರ ಪರವಾಗಿ ಬರೆದಿರುವುದಾಗಿ ನಮೂದು ಕಂಡುಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಣ ಶಾಸನದ ಆಧಾರದಲ್ಲಿ ಸದರಿ ವ್ಯಕ್ತಿಗಳ ಹೆಸರಿನಲ್ಲಿ ಖಾತಾ ಬದಲಾವಣೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಎಲ್ಲಾ ಸತ್ಯಾಂಶಗಳು ನನಗೆ ತಿಳಿದಿದ್ದರು ಮತ್ತು OS 66/2009 ವಜಾ ಆಗಿರುವ ವಿಷಯ ನನಗೆ ತಿಳಿದಿದ್ದರು ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗಳು ಬಂದ ಆಸ್ತಿಗಳಲ್ಲಿ ಕೆಲವು ಭಾಗಗಳಲ್ಲಿ ಭದ್ರಾ ಮೇಲ್ದಂಡೆ ಯೋಜನೆಯಯಲ್ಲಿ ಸರ್ಕಾರವು ಸ್ವಾಧೀನಕ್ಕೆ ವಶಪಡಿಸಿಕೊಂಡಿರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ ಬಳಿ ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಬಂದ ಹಣದಲ್ಲಿ ನನಗೂ ಸ್ವಲ್ಪ ಹಣ ಕೊಡುವಂತೆ ಹಿಂದೆ ಕೇಳಿದ್ದು ಅದಕ್ಕೆ ಅವರು ನೀರಾಕರಿಸಿರುವ ಕಾರಣ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸದರಿ ಸಮಯದಲ್ಲಿ 2 ನೇ ಪ್ರತಿವಾದಿ ನನಗೆ ಹಣ ನೀಡಿದ್ದರೆ ನಾನು ಈ ದಾವೆಯನ್ನು ಹೂಡುತ್ತಿರಲಿಲ್ಲ ಎಂದರೆ ಸರಿ. ನನಗೆ ಸತ್ಯಾಂಶಗಳು ತಿಳಿದಿದ್ದರು ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮೇಲಿನ ವೈಯಕ್ತಿಕ ದ್ವೇಷದಿಂದ ಈ

ಸುಳ್ಳು ದಾವೆ ಹೂಡುತ್ತಿದ್ದೇನೆ ಎಂದರೆ ಸರಿಯಲ್ಲ. 1991 ರಲ್ಲಿಯೇ ದಾವ ಆಸ್ತಿಗಳು ವಿಭಾಗ ಆದ ಕಾರಣ ಕಾನೂನಿನಡಿ ನಿಲ್ಲತಕ್ಕದಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

Sd/-xxx

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: